ಕಾವ್ಯ ಸಂಕಲನ



ಹನಿ–ದನಿ

ಮನದಾಳದಿಂದ ಮೂಡಿದ ಅಕ್ಷರಗಳ ಕಾವ್ಯ ಪಯಣ

ಕೃತಿ ಕರ್ತೃ

❣️ ಪ್ರಿಯದರ್ಶಿ

ಹಕ್ಕುಸ್ವಾಮ್ಯ

© ❣️ ಪ್ರಿಯದರ್ಶಿ

ಈ ಕೃತಿಯಲ್ಲಿರುವ ಕವನಗಳು ಲೇಖಕರ ಸ್ವಂತ ಕೃತಿಗಳು.

ಲೇಖಕರ ಅನುಮತಿಯಿಲ್ಲದೆ ಈ ಕೃತಿಯನ್ನು ಸಂಪೂರ್ಣವಾಗಿ ನಕಲಿಸುವುದು, ಮರುಪ್ರಕಟಿಸುವುದು ಅಥವಾ ವಾಣಿಜ್ಯ ಉದ್ದೇಶಕ್ಕೆ ಬಳಸುವುದು ಅನುಮತಿಸಲಾಗುವುದಿಲ್ಲ.

ಮುನ್ನುಡಿ

ಕೆಲವು ಭಾವನೆಗಳು ದೊಡ್ಡದಾಗಿ ಹೇಳಿಸಿಕೊಳ್ಳುವುದಿಲ್ಲ. ಅವು ಮೌನವಾಗಿ ಮನಸ್ಸಿನಲ್ಲಿ ಹುಟ್ಟಿ, ಒಂದು ಹನಿಯಂತೆ ಕಣ್ಣಂಚಿನಲ್ಲಿ ನಿಂತು, ಒಂದು ದನಿಯಂತೆ ಅಕ್ಷರಗಳಲ್ಲಿ ಹೊರಬರುತ್ತವೆ.

ಅಂತಹ ಮನದಾಳದ ಭಾವನೆಗಳ ಪುಟ್ಟ ಕಾವ್ಯ ಸಂಕಲನವೇ **“ಹನಿ–ದನಿ”**.

ಈ ಕವನಗಳಲ್ಲಿ ಪ್ರೀತಿ ಇದೆ, ವಿರಹವಿದೆ, ನಗು ಇದೆ, ನೋವಿದೆ. ಪ್ರಕೃತಿಯ ಸೊಬಗಿದೆ, ಬದುಕಿನ ಕಠೋರ ಸತ್ಯಗಳಿವೆ.

ಕೆಲವೆಡೆ ಪ್ರೀತಿಯ ಕಣ್ಣುಗಳಿಂದ ಜಗತ್ತನ್ನು ನೋಡಿದ್ದೇನೆ. ಕೆಲವೆಡೆ ಬದುಕಿನ ಕಹಿ ಅನುಭವಗಳನ್ನು ಅಕ್ಷರಗಳಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದೇನೆ. ಮತ್ತೊಂದೆಡೆ ಹಸಿದವನ ನೋವು, ಮೌನದ ಮಾತು, ಕಾಲದ ಆಟ, ಮಾನವೀಯತೆಯ ಮಹತ್ವ— ಇವೆಲ್ಲವೂ ತಮ್ಮದೇ ದನಿಯಲ್ಲಿ ಮಾತನಾಡುತ್ತವೆ.

ಈ ಕವನಗಳು ದೊಡ್ಡ ಸಾಹಿತ್ಯದ ಮಾತುಗಳನ್ನಾಡಲು ಹುಟ್ಟಿದವುಗಳಲ್ಲ. ಮನಸ್ಸಿಗೆ ಅನಿಸಿದುದನ್ನು ಸರಳವಾಗಿ ಹೇಳಲು ಹುಟ್ಟಿದವು.

ಒಂದು ಮಳೆಯ ಹನಿ ಭೂಮಿಯನ್ನು ತಣಿಸುವಂತೆ, ಒಂದು ಒಳ್ಳೆಯ ಮಾತು ಮನಸ್ಸನ್ನು ತಣಿಸಬಹುದು. ಹಾಗೆಯೇ ಒಂದು ಸಣ್ಣ ಕವಿತೆಯೂ ಯಾರಾದರೊಬ್ಬರ ಮನಸ್ಸನ್ನು ಮುಟ್ಟಬಹುದು ಎಂಬ ನಂಬಿಕೆಯಿಂದ ಈ ಅಕ್ಷರಗಳನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ.

ನನ್ನ ಕವನಗಳಲ್ಲಿ ನಿಮಗೆ ನಿಮ್ಮದೇ ಭಾವನೆಗಳು ಕಾಣಿಸಿಕೊಂಡರೆ, ಯಾವುದೋ ಒಂದು ಸಾಲು ನಿಮ್ಮ ಮನಸ್ಸನ್ನು ತಟ್ಟಿದರೆ, ಈ “ಹನಿ–ದನಿ” ತನ್ನ ಅರ್ಥವನ್ನು ಕಂಡುಕೊಂಡಂತೆಯೇ.

ಇಲ್ಲಿರುವ ಪ್ರತಿಯೊಂದು ಕವನವೂ ನನ್ನ ಮನಸ್ಸಿನಿಂದ ಮೂಡಿದ ಒಂದು ಹನಿ. ಅದು ಅಕ್ಷರವಾಗಿ ಬಂದು ನಿಮ್ಮ ಮನದೊಳಗೆ ಒಂದು ದನಿಯಾಗಲಿ ಎಂಬುದೇ ನನ್ನ ಆಶಯ.

ಅಕ್ಷರಗಳನ್ನು ಪ್ರೀತಿಸುವ ಓದುಗರಿಗೆ ಈ ಪುಟ್ಟ ಕಾವ್ಯಕಾಣಿಕೆ...

❣️ ಪ್ರಿಯದರ್ಶಿ

ಕವನಗಳ ಪಟ್ಟಿ

1. ಚಕ್ರ — ಪುಟ 4
2. ನಿನ್ನ ನಡೆ — ಪುಟ 5
3. ಮಳೆ ಮತ್ತು ಕಣ್ಣೀರು — ಪುಟ 6
4. ಸ್ವರ್ಣ ಮಿಂಚಾಕ್ಷರ — ಪುಟ 7
5. ಬೆಳಕು — ಪುಟ 8
6. ಪ್ರೀತಿಯ ಕಂಗಳು — ಪುಟ 9
7. ಮೌನಿ ವೃಕ್ಷ — ಪುಟ 10
8. ನಮಗೆ ನಾವೇ ವಿಸ್ಮಯ — ಪುಟ 11
9. ನಗುವಿನ ಮಹಿಮೆ — ಪುಟ 12
10. ಹತಾಶೆ — ಪುಟ 13
11. ಕಂಬನಿ ಕಾವ್ಯ — ಪುಟ 14
12. ಸತ್ಯ — ಪುಟ 15
13. ಕವಲು ದಾರಿ — ಪುಟ 16
14. ಕಾಲಚಕ್ರ — ಪುಟ 17
15. ಹಣೆ ಬರಹ — ಪುಟ 18
16. ಸೌಂದರ್ಯ — ಪುಟ 19
17. ಕಲೆ — ಪುಟ 20
18. ಗೆಜ್ಜೆ ಸದ್ದು — ಪುಟ 21
19. ಉಸಿರು — ಪುಟ 22
20. ಎಂಜಲು ಅನ್ನ — ಪುಟ 23

1. ಚಕ್ರ

ತಿರುಗುವ ಚಕ್ರದ ಚಲನೆ

ನಿಲ್ಲಲುಂಟು ಲಗಾಮು ನಮ್ಮ ಕೈಯಲ್ಲಿ

ಆದರೆ..

ಉರುಳುವ ಕಾಲವು

ನಿಲ್ಲದು ನಗದು ಕೊಟ್ಟರೂ.

ನೀನು ನಡೆದಾಗ

ನೆಲವು ನರ್ತನ

ಮಾಡಿದಂತೆ ಕಾಣುತ್ತಿದೆ.

ಬಳಕುವ ನಿನ್ನ

ನಡೆ ನೋಡಿ ಅನಿಸಿದ್ದು.

ನೀನು ನಡೆದಾಗ

ಚಂಡ ಮಾರುತ

ಬಂದಂತೆ ಕಾಣುತ್ತಿದೆ

ಕೈಯಾಡಿಸುತ್ತ ನಿನ್ನ

ನಡೆ ನೋಡಿ ಅನಿಸಿದ್ದು.

ನೀನು ನಡೆದಾಗ

ಜನರು ಮರುಳ

ಆದಂತೆ ಕಾಣಿಸುತ್ತಿದೆ

ನಗುತ್ತಾ ನಿನ್ನ

3. ಮಳೆ ಮತ್ತು ಕಣ್ಣೀರು

ಮಳೆ ಸುರಿದರೆ ಭೂಮಿ ಹಗುರ

ಕಣ್ಣೀರು ಸುರಿದರೆ ಮನ ಹಗುರ

ಮಳೆ ಅತಿಯಾದರೂ ಅನಾಹುತ

ಕಣ್ಣೀರು ಅತಿಯಾದರೂ ಅನಾಹುತ

ಮಳೆಯ ಮಿತಿ ಬೆಳೆ ಬೆಳೆಯುವುದು

ಕಣ್ಣೀರ ಮಿತಿ ಬಾಳು ಬೆಳಗುವುದು.

4. ಸ್ವರ್ಣ ಮಿಂಚಾಕ್ಷರ

ಬದುಕಿ ಹಾಳಾದವರು

ಹಾಳಾಗಿ ಬದುಕಿದವರು

ಇರುವಾಗ ಜಗದಲಿ.

ಅಪರೂಪವಾಗಿ ಸಿಕ್ಕರು

ಕೆಲವೇ ಕೆಲವರು

ತಾಳೆಗರಿಯ ಮೇಲೆ

ಸ್ವರ್ಣ ಮಿಂಚಾಕ್ಷರಗಳಾಗಿ.

5. ಬೆಳಕು

ಭೂಮಿಗೆ ಬೆಳಕು

ಹಗಲಿಗೆ ಸೂರ್ಯ

ರಾತ್ರಿಗೆ ಚಂದಿರ

ಬಾಳಿಗೆ ಬೆಳಕು

ಪ್ರೀತಿಯ ಹಾದಿಯಲ್ಲಿ

ನಾವು ಜೊತೆ ಜೊತೆಯಲಿ

ನನ್ನ ನಿನ್ನ ಪ್ರೀತಿಗೆ

ರವಿಚಂದ್ರ ಸಾಕ್ಷಿಗಳು.

6. ಪ್ರೀತಿಯ ಕಂಗಳು

ಬೇಡ ಬೇಡ ಎಂದರೂ

ಬಿಡದ ಮಾಯೆ

ಮೂಡಿದೆ ಎದೆಯಲ್ಲಿ

ಪ್ರೀತಿಯ ಛಾಯೆ.

ಪ್ರೀತಿಯ ಕಣ್ಣಿಗೆ ಕಂಡ

ಕಪ್ಪು ಕಲ್ಲು

ಕಾಮನ ಬಿಲ್ಲಿನಂತೆ

ಎಲ್ಲವೂ ವರ್ಣಮಯ

ಸುಂದರ ಈ ಭೂಮಿಯಂತೆ.

7. ಮೌನಿ ವೃಕ್ಷ

ಮೌನಿ ಮೌನಿ ಬದುಕಿದೆ ನಾನು

ಕೊಡಲಿ ಏಟು ಕೊಟ್ಟರೂ ನೀನು

ಸಹನೆ ಕಳೆಯದೆ ನಿಂತಿದೆ ನಾನು

ನೀನು ತಿರುಕ, ನಾನು ಮೂರುಕ

ಅಂದುಕೊಂಡೆ ನಾನು.

8. ನಮಗೆ ನಾವೇ ವಿಸ್ಮಯ

ಜಗತ್ತು ಒಂದು ವಿಸ್ಮಯ

ಗೊತ್ತು ಎಲ್ಲರಿಗೂ ಗೊತ್ತು

ಅದರಲ್ಲಿ ನೀನು ಕೂಡ ಒಂದು.

ನಿನ್ನ ಮುದ್ದಾದ ಮುಖ

ನಿನ್ನ ಮುದ್ದಾದ ಮನಸ್ಸು

ನಿನ್ನ ಶುದ್ಧ ವಿಚಾರ

ಇತ್ಯಾದಿ ಇತ್ಯಾದಿ

ಇವೆಲ್ಲವೂ ವಿಸ್ಮಯವಲ್ಲವೆ?

ಹೌದು, ನಾನು ನಂಬಿದ್ದೇನೆ

ನಾನೊಬ್ಬ ವಿಸ್ಮಯವು

ಜಗದ ಅಪರೂಪವು

ಒಂದು ಭಾವಜೀವಿ ಎಂದು.

9. ನಗುವಿನ ಮುಖವು

ಎದೆಯಾಳದ ನಗು

ನಿನ್ನ ಮುಖದ ಮೇಲೆ ಕಂಡೆ.

ದೇಹ ಭಾರವಾದರೇನು ನಿನಗೆ?

ಮನಸ್ಸಿನ ಭಾರ ಹಗುರವಾಗಲು

ಇದೊಂದು ಉಪಚಾರನಾ?

ಅದಕ್ಕೆ ಹೇಳುವರು

ನನ್ನಂಥ ಜೀವಿಗಳು...

ಭಾರವಾದ ಸಮಸ್ಯೆ

ಭಾರವಾದ ಭಾವನೆಗಳಿರಲಿ

ನಮ್ಮಲ್ಲಿ ಬೆಟ್ಟದಷ್ಟು.

ಮುಖದ ಮೇಲಿನ

ಕಿರು ನಗೆಯೊಂದರ ಮುಂದೆ

10. ಹತಾಶೆ

ಮುಖ ತುಂಬ ನಗುವಿಗೆ

ಪ್ರೀತಿಯ ಆಮಂತ್ರಣಗಳು

ಅವಳು ಇವಳು ಹೀಗೆ ಹತ್ತಾರು..

ಇಷ್ಟಪಟ್ಟ ಹೃದಯವೇ

ಮಿಂಚಿನಂತೆ ಮಾಯವಾಗಿ

ಮಾತನಾಡಲು ಶಬ್ದಗಳು ಸಿಗದೇ

ನಾನು ಮೂರ್ಖ ಮೌನಕ್ಕೆ ಶರಣಾದೆ.

11. ಕಂಬನಿ ಕಾವ್ಯ

ಕಾಣದ ಕಡಲಿನ ರಸಯಾತ್ರೆಯು

ಒಂಟಿತನದ ದುರ್ಗಮ ಹಾದಿಯಲ್ಲಿ

ಪಯಣಿಸಿದ ಯುವಕನು

ಹುಡುಗಿಯನ್ನು ಪ್ರೀತಿಸಿ

ಪ್ರೇಮರಸದಲ್ಲಿ ಸೋತನು!

ಬದುಕು ಮುಂದುಡಿದ ಯುವಕನು

ವಿರಹದ ಹನಿ ಹನಿ ಕಂಬನಿ

ಅಕ್ಷರ ಮಾಲೆಯಾಗಿ

ಕಾವ್ಯವೊಂದು ಪೂರ್ಣವಾಯಿತು!!

12. ಸತ್ಯ

ಸಂಪೂರ್ಣ ಸತ್ಯ ಎಂದಿಗೂ

ಪೂರ್ಣವಾಗಿ ಹೊರಬರದು.

ಗಂಟಲು ತುಂಬಿದ ಮದಿರೆಯು

ಸ್ವಲ್ಪ ಸತ್ಯ ಹೊರಗೆ ಹಾಕಿತು.

ಶತ್ರುಗಳು ಮಿತ್ರರು

ಸ್ವಲ್ಪವೇ ಕಂಡರು..

ರವಿಯು ಕಂಡಿರದ ಸತ್ಯ

ಅನುಭವ ಕಂಡಿತು.

ನಾನು ಯಾರು? ಎಂಬುದಾಗಿ

ಸೋಲುಗಳು ಉತ್ತರ ಕಂಡಿತು.

13. ಕವಲು ದಾರಿ

ಪ್ರೀತಿ ಚಿಗುರೊಡೆದಾಗ

ಮಲ್ಲಿಗೆಯಂತೆ ಘಂ ಎನ್ನುತಿತ್ತು.

ಪ್ರೀತಿ ಕವಲೊಡೆದಾಗ

ಹಾವಿನಂತೆ ಬುಸ್ ಎಂದಿತ್ತು.

ಪ್ರೀತಿಯಿಂದ ಕರೆದಾಗ

ಎದೆಯಾಳದ ಮೌನದಲ್ಲೂ

ವಿಷ ಸರ್ಪದ ಹಲ್ಲು ತೋರಿಸಿ

ಕಣ್ಣಿಗೆ ಕಾಣದ ದಟ್ಟ ಇಬ್ಬನಿಯಲ್ಲಿ

ಶಾಶ್ವತವಾಗಿ ಮರೆಯಾದಳು.

14. ಕಾಲಚಕ್ರ

ಮೊನ್ನೆ ಮೊನ್ನೆ ನೋಡಿದೆ

ಆತ ಚೆನ್ನಾಗಿಯೇ ಇದ್ದ.

ಮೊನ್ನೆ ಮೊನ್ನೆ ನೋಡಿದೆ

ಆತನ ಬಟ್ಟೆ ಚೆನ್ನಾಗಿಯೇ ಇತ್ತು.

ಮೊನ್ನೆ ಮೊನ್ನೆ ನೋಡಿದಾಗ

ಆತ ಹಸಿದವನಂತೆ ಕಾಣಲಿಲ್ಲ.

ಇಂದು ಆತ ಕಂಡಾಗ

ಸಿಡಿಲು ಬಡಿದ ಹಾಗಾಯಿತು.

ಹಸಿದವ ಅರೆನಗ್ನ

ರಸ್ತೆ ಪಕ್ಕ ಮಲಗಿದ್ದ!!

15. ಹಣೆ ಬರಹ

ದುಃಖಿಗಳಿಗೆ

ಸಾಂತ್ವನ ಹೇಳಲು

ಸೃಷ್ಟಿಸಿದ ಪದವೇ

ಇದು ಹಣೆಬರಹ!

ಆದರೆ...

ಜಯಶಾಲಿಗಳಿಗೆ

ಶ್ಲಾಘನೆ

ಶಿಲೆಯ ಮೇಲೆ

ಶಿಲಾ ಬರಹವಾಗಿ!!

ಆಹಾ ಬಿಳುಪು

ಚಕ್ ಚಕ್

ಮೂಗುತಿಯು

ಮುಖದ ಮೇಲೆ

ಗಗನ ಚುಕ್ಕಿಯೊಂದು

ಹೊಳೆಯಂತೆ

ಅನಿಸುತ್ತಿದೆ.

ಬಾನು ಕಪ್ಪಾದರೇನು?

ಗಗನ ಬಿಳುಪಾದರೇನು?

ರವಿಚಂದ್ರತಾರೆಗಳು

ಹೊಳೆಯುವುದು

ಗಗನದಲ್ಲಿಯೇ.. ಅಲ್ಲವೇ?

ಹಾಗೆಯೇ..

17. ಕಲೆ

ನನ್ನ ಕೈ ಬರಹದ ಕವಿತೆ

ನಿನ್ನ ಕೈ ಚಳಕದ ಕಸೂತಿ

ಇವೆರಡು ಒಂದಾಗಿ

ನಮ್ಮ ಪ್ರೀತಿಗೆ

ಮುನ್ನುಡಿ ಬರೆದರು.

18. ಗೆಜ್ಜೆ ಸದ್ದು

ಟಿಪ್ ಟಿಪ್ ಜೀನುಗುವ

ಮಳೆಯ ದನಿಯಂತಿದೆ

ಎದೆಯ ದನಿಯು...

ಸದ್ದಾಗುವುದು ಜೋರು

ನಿನ್ನ ಗೆಜ್ಜೆಯ ಸದ್ದು ಕೇಳಿದಂತೆ!

19. ಉಸಿರು

ದೂರ ಬಾನಿನ

ಮಳೆ ಹನಿಯಲ್ಲಿ

ಅಡಗಿದೆ

ಕೋಟಿ ಜೀವಿಗಳ ಉಸಿರು.

ಒಣ ನೆಲದ ಮೇಲೆ

ಹಸಿರು ಮೂಡಿದಾಗ

ಅನಿಸುವುದು ಹೀಗೆ.

ಯಾರಿಗೂ ಕಾಣದ ಉಸಿರು ನೀನು.

20. ಎಂಜಲು ಅನ್ನ

ಹಲವರಿಗೆ

ಹಲವು ತರಹದ ಹಸಿವು.

ಊಟ ಸಿಕ್ಕರೆ ಹಂಚಿ ತಿನ್ನಿ

ಅಕ್ಕ ಪಕ್ಕ ಒಮ್ಮೆ ನೋಡಿ

ಇರಬಹುದು ಯಾರೋ

ಹಸಿದವರು...

ಹಂಚಿ ತಿಂದರೆ

ಕುಟುಂಬದ ರಕ್ಷಣೆ.

ಸುಮ್ಮನೆ ಯಾಕೆ?

ಎಂಜಲು ಅನ್ನಕ್ಕೆ

ನಮ್ಮಲ್ಲೇ ಗದ್ದಲ!?

ಸಮಾಪ್ತಿ

ಅಕ್ಷರಗಳು ನನ್ನವು...

ಭಾವನೆಗಳು ನಮ್ಮವು.

ಓದಿದ ನಿಮ್ಮ ಮನಸ್ಸಿನಲ್ಲಿ

ನನ್ನ ಒಂದು ಸಾಲು ಉಳಿದಿದ್ದರೆ,

ಅದೇ ಈ ಕಾವ್ಯಕ್ಕೆ

ಸಿಕ್ಕ ದೊಡ್ಡ ಬಹುಮಾನ.

ನನ್ನ ಮನದಾಳದಿಂದ ಮೂಡಿದ

ಈ ಹನಿ–ದನಿ

ನಿಮ್ಮ ಮನದೊಳಗೆ

ಒಂದು ದನಿಯಾಗಲಿ.

❣️ **ಪ್ರಿಯದರ್ಶಿ**